ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday, the 28th July, 1982 / Shravana 6, 1904 S.E.

The House met in the Assembly Chamber, Vidhana Soudha, at 9-00 A. M.

MR. SPEAKER (SRI K. H. RANGANATH) in the Chair.

STARRED QUESTIONS

(To which oral answers were given)

Drinking water Facilities to the Balloli Constituency Indi Taluk, Bijapur District

87 Sri S.S. ARAKERI (Balloli)—Will the Minister for Rural Development and Panchayath Raj be pleased to state.—

(a) number of villages benefitted with protected water in Bolloli Constituency, Indi Taluk, Bijapur District ;

(b) number of villages without protected water in Balloli Constituency ;

(c) number of Harijan Colonies which are not having drinking water wells in Balloli Constituency ;

(d) steps taken by Government as assured to provide the protected water to the remaining Harijan Colonies of the Balloli Constituency and within which period ?

Sri B. RAMAIAH (Minister for Rural Development and Panchayat Raj)—

(a) 83 Villages are coming under Balloli Constituency. Out of 83, 70 villages are benefited with protectted drinking water.

(b) 13 Villages are not provided with protected drinking water.

(c) 30 Harijan Colonies are not having drinking water wells exclusively.

(d) The Govt. at present is giving priority to "No source Village" first. Instructions are issued to the Field Officers to select Harijan Colonies while locating new sources of drinking water supply. Steps are taken to provide protected drinking water to all the villages, Harijan Colonies, Tandas and Janatha Housing Colonies within a span of 8 years under the International Drinking Water Supply Sanitation Decade (*i. e.* 1981 to 1990) programme.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಈ ಪ್ರಶ್ನೆಯು (ಅ)ಗೆ ಉತ್ತರವಾಗಿ ಬಳ್ಳೊಳ್ಳಿ ಚುನಾವಣಾ ಕ್ಷೇತ್ರದ ವ್ಯಾಪ್ತಿಗೆ ೮೩ ಗ್ರಾಮಗಳು ಬರುತ್ತದೆ ಅಂತ ಹೇಳಿದ್ದೀರಿ. ನನಗೆ ತಿಳಿದು ಬಂದಿರುವ ಪ್ರಕಾರ ೮೨ ಹಳ್ಳಿಗಳು ಆಗುತ್ತವೆ. ಮತ್ತು ಇದರಲ್ಲಿ ೮೦ ಗ್ರಾಮಗಳ ಪೈಕಿ ೭೦ ಗ್ರಾಮಗಳು ಸುರಕ್ಷಿತ ಕುಡಿಯುವ ನೀರಿನ ಸೌಕರ್ಯವನ್ನೊದಗಿಸಿದೆ ಅಂತ ಹೇಳಿದ್ದೀರಿ. ನಿಮ್ಮ ಲೆಕ್ಕಾಚಾರದ ಪ್ರಕಾರ ಇನ್ನು ೧೩ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಿಲ್ಲಾ. ಆ ೧೩ ಗ್ರಾಮಗಳು ಯಾವುವು, ಆ ಬಗ್ಗೆ ತಾವು ಏನೇನು ಕಾರ್ಯಕ್ರಮಗಳನ್ನು ಕೈಗೊಡಿದ್ದೀರಾ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಮಪ್ಪ —ಸನ್ಮಾನ್ಯ ಅಧ್ಯಕ್ಷರೇ, ಈಗ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರಿಗೆ ಆ ೧೩ ಗ್ರಾಮಗಳು ಯಾವುವು ಎನ್ನುವುದು ತಿಳಿಯಬೇಕಾದರೆ ಆ ಮಾಹಿತಿಯನ್ನು ಆಮೇಲೆ ಒದಗಿಸಿ ಕೊಡುತ್ತೇನೆ. ಆದರೆ ಮಾನ್ಯ ಸದಸ್ಯರು ಆ ೧೩ ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಒದಗಿಸಿಲ್ಲ ಎಂದ ಮಾತ್ರಕ್ಕೇ ಅಲ್ಲಿ ಕುಡಿಯುವ ನೀರು ಇಲ್ಲ ಎನ್ನುವ ಅರ್ಥವಲ್ಲ. ಅಲ್ಲಿ ಸಾಮೂಹಿಕವಾದ ಬಾವಿಗಳು ಇವೆ. ಅವರಿಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡ ಬೇಕೆನ್ನುವ ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದು ನನಗೆ ಅರ್ಥವಾಗಿದೆ. ಎಲ್ಲೆಲ್ಲಿ ಹರಿಜನ ಕಾಲೋನಿಗಳು ಇವೆ ಅಲ್ಲಿ ನೀರಿನ ಮೂಲಗಳನ್ನು ಕಂಡುಹಿಡಿಯಬೇಕೆಂದು ತಾಲ್ಲೂಕು ಅಭಿವೃದ್ಧಿ ಕ್ಷೇತ್ರಾಧಿಕಾರಿಗಳಿಗೆ ನಾವು ಸೂಚನೆ ಕೊಟ್ಟಿದ್ದೇವೆ. ೧೯೮೧-೮೨ ರಲ್ಲಿ ೯೦ ಹಳ್ಳಿಗಳನ್ನು ಗುರುತಿಸಿ ಅಲ್ಲೆಲ್ಲ ನೀರಿನ ಸೌಕರ್ಯವನ್ನು ಮಾಡಿಕೊಟ್ಟಿದ್ದೇವೆ. ಈಗಾಗಲೇ ೨೨,೦೦೩ ಪ್ರಗ್ಮೆಟೀವ್ ವಿಲೇಜ್‌ಸ್‌ನಲ್ಲಿ ೩೦ ಸಾವಿರ ಹರಿಜನ ಕಾಲೋನಿಗಳು ಏನು ಇವೆ ಅದರಲ್ಲಿ ೫೬ ಅನ್ನು ಗುರುತಿಸಿದ್ದಾರೆ. ಆ ಗ್ರಾಮಗಳಿಗೆ ನೀರಿನ ಸೌಲಭ್ಯವನ್ನು ಮಾಡಿಕೊಡಬೇಕು ಹೇಳಿದ್ದೇವೆ. ಇವರ ಬಗ್ಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಅವರಿಗೆ ಸಾಮೂಹಿಕವಾದ ಭಾವಿಗಳಲ್ಲಿ ಈ ಒಂದು ವ್ಯವಸ್ಥೆ ಇದೆ, ತಾವು ಹೇಳಿದುದೂ ಕೂಡ ಪರಿಶೀಲನೆಯಲ್ಲಿದೆ, ಆದರೆ ಸಾಮೂಹಿಕವಾದ ಭಾವಿಗಳಲ್ಲಿ ಅಡ್ಡಿತೆ ಮೇರೆಗೆ ಇವರಿಗೆ ವ್ಯವಸ್ಥೆ ಮಾಡಿ ಕೊಡಬೇಕು ಎಂದು ಹೇಳಿದ್ದೇವೆ.

ಶ್ರೀ ಎಸ್. ಎಸ್. ಆರಕೇರಿ.—ನಾನು ಇವರಿಗೆ ಪ್ರತ್ಯೇಕವಾದ ಭಾವಿಗಳನ್ನು ಕೇಳುವುದಕ್ಕೆ ಕಾರಣ ಏನು ಎಂದರೆ ಪಬ್ಲಿಕ್ ಬಾವಿಗಳಲ್ಲಿ ಹರಿಜನ ಗಿರಿಜನರು ಸವರ್ಣೀಯರನ್ನು ತುಂಬಬೇಕು ಅನ್ನುವ ಧೋರಣೆ ಏನೋ ಒಳ್ಳೆಯದು. ಆದರೆ ಅವರು ಪಬ್ಲಿಕ್ ಭಾವಿಗೆ ಹೋದರೆ ಗಲಾಟೆ ನಡೆಯುತ್ತದೆ ಆದ್ದರಿಂದ ಅವರಿಗೆ ತೊಂದರೆಯೂ ಆಗುತ್ತದೆ. ಅವರು ಆ ಭಾವಿಗಳಲ್ಲಿ ಹರಿಜನರಿಗೆ ತುಂಬಿ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲ ಆದರಿಂದಲೇ ನಾನು ಹರಿಜನರಿಗೆ ಪ್ರತ್ಯೇಕವಾದ ಕುಡಿಯುವ ನೀರಿನ ಭಾವಿಗಳನ್ನು ಮಾಡಿಕೊಡಬೇಕು ಎಂದು ಕೇಳಿದ್ದು. ನಮಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳಾದರೂ ಕೂಡ ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತ್ ಇಲಾಖೆಯಲ್ಲಿ ತಮ್ಮ ಇಲಾಖೆಯಲ್ಲಿ ಇನ್ನೂ ಈ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಪ್ರಯತ್ನವೇ ನಡೆಯುತ್ತಾ ಇಲ್ಲ. ಅದಕ್ಕೋಸ್ಕರವಾಗಿನೇ ಇವರಿಗೆ ಪ್ರತ್ಯೇಕವಾದ ಭಾವಿಗಳನ್ನು ಮಾಡಿಕೊಡಬೇಕು ಎಂದು ಕೇಳಿದ್ದು. ಇದುವರೆಗೂ ಸಹ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈ ಸಾಮೂಹಿಕವಾದ ಭಾವಿಗಳಿಗೆ ಅವರು ಹೋದರೆ ಅಲ್ಲಿ ಜಗಳ ಆಗುತ್ತದೆ.

ಅಧ್ಯಕ್ಷರೆ.—ಸ್ವಲ್ಪ ಜಗಳ ಆದರೆ ಏನು ಗಂಟು ಹೋಗುತ್ತದೆ ? ಸ್ವಲ್ಪ ದಿವಸದವರೆಗೆ ನಡೆಯ ಬಹುದು. ಪ್ರತ್ಯೇಕವಾದ ಭಾವಿ ಇದ್ದರೆ ಇದು ನಿವಾರಣೆಯಾಗುತ್ತದೆಯೇ ? ಸ್ವಲ್ಪ ದಿವಸವಾದ ನಂತರ ಅವರ ಸಮಸ್ಯೆ ನಿವಾರಣೆಯಾಗುತ್ತದೆ.

ಶ್ರೀ ಎಸ್.ಎಸ್. ಅರಕೇರಿ. — ಸ್ವಾಮಿ, ಹಳ್ಳಿಗಳಲ್ಲಿ ಈ ಸಾಮೂಹಿಕವಾದ ಭಾವಿಗಳಲ್ಲಿ ಹರಿಜನ ಗಿರಿಜನರು ನೀರು ತುಂಬುವುದಕ್ಕೆ ಹೋದರೆ, ಹೆಣ್ಣುಮಕ್ಕಳಾಗಲಿ ಅಥವಾ ಗಂಡಸರೇ ಆಗಲಿ ನೀರು ತುಂಬುವುದಕ್ಕೆ ಹೋದರೆ ಹೊಡೆಯುತ್ತಾರೆ, ಗಲಾಟೆ ಮಾಡುತ್ತಾರೆ, ತೊಂದರೆ ಕೊಡುತ್ತಾರೆ. ಆಮೇಲೆ ಪರಿಸ್ಥಿತಿ ಗಂಭೀರಕ್ಕೆ ಹೋಗುತ್ತದೆ. ಈ ಬಗ್ಗೆ ಸಿ.ಆರ್.ಪಿ ಏನು ಇದೆ ಅದು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ತಮ್ಮ ಇಲಾಖೆ ಏನು ಈ ಪಂಚಾಯಿತಿ ಇಲಾಖೆ ಈ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಯಾವ ಕಾರ್ಯಕ್ರಮಗಳನ್ನೂ ಕೈಗೊಂಡಿಲ್ಲಾ. ಆದುದರಿಂದ ಹಳ್ಳಿಗಳಲ್ಲಿ ಗಂಭೀರವಾದ ಪರಿಸ್ಥಿತಿ ಇರುವುದರಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ಆ ಜನರಿಗೆ ಯಾವ ರೀತಿ ಒದಗಿಸಿಕೊಡುತ್ತಾರೆನ್ನುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ಎಂದು ಬಯಸುತ್ತೇನೆ.

ಶ್ರೀ ಬಿ. ರಾಮಯ್ಯ —ಮಾನ್ಯ ಸದಸ್ಯರು ಈ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಈ ಪಂಚಾಯತ್ ರಾಜ್ ಖಾತೆಯಲ್ಲಿ ಏನೂ ಕೆಲಸ ನಡೆದಿಲ್ಲ ಎಂದು ಹೇಳುತ್ತಾರೆ. ತಮಗೆ ಹೇಳಬೇಕಾದರೆ ಹೋದಸಲ ಸ್ವತಃ ನಾನೇ ಹೋಗಿ ಹೇಳಿದ್ದೇನೆ. ಈ ಜನತಾ ಮನೆಗಳನ್ನು ಕಟ್ಟುತಕ್ಕಂಥ ಸಂದರ್ಭದಲ್ಲಿ ಅವರಿಗೇನೇ ಪ್ರತ್ಯೇಕವಾಗಿ ಕಟ್ಟಿಕೂಡದು ಎಲ್ಲಾ ವರ್ಗದ ಜನರೂ ಇವರು ಹಾಗೆ ಸಾಮೂಹಿಕವಾಗಿ ಈ ಮನೆಗಳನ್ನು ಕಟ್ಟಬೇಕು ಎಂದು ಹೇಳಿದ್ದೇನೆ ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆಯೂ ಇರಬೇಕು ಎಂದು ಹೇಳಿದ್ದೇನೆ. ಹಿಂದಿನಿಂದಲೂ ಈ ಬಗ್ಗೆ ರೂಢಮೂಲವಾಗಿ ಬಂದಿರತಕ್ಕಂಥಾ ಪದ್ಧತಿಯನ್ನು ಈ ರೀತಿಯಾಗಿ ಹೋಗಲಾಡಿಸಿದರೆ ಕಾಲಕ್ರಮೇಣ ಸರಿ ಹೋಗುತ್ತದೆ, ಮಾನ್ಯ ಸದಸ್ಯರು ಒಂದು ಸಲ ಇವರಿಗೆ ಪ್ರತ್ಯೇಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದು ಹೇಳುತ್ತಾರೆ ಇನ್ನೊಂದು ಸಲ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಈ ಪಂಚಾಯತ್ ರಾಜ್ ಇಲಾಖೆ ಏನೂ ಕೆಲಸ ಮಾಡಿಲ್ಲಾ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು ಧ್ವಂಧ್ವವಾದ ಅಭಿಪ್ರಾಯ ಕೊಡುತ್ತಾರೆ. ಅದೇನೇ ಇರಲಿ, ಅವರ ಕಳಕಳಿ ನನಗೆ ಅರ್ಥವಾಯಿತು. ಈ ಕುಡಿಯುವ ನೀರಿನ ವ್ಯವಸ್ಥೆಗೆ ವಿಜಾಪುರ ಜಿಲ್ಲೆಗೆ ೧ ಲಕ್ಷ ಸಾವಿರ ಕೊಟ್ಟಿದ್ದೇವೆ. ಇನ್ನು ಉಳಿದ ೨/೩ ಭಾಗದ ಗ್ರಾಂಟ್‌ಅನ್ನು ಈ ಅಧಿವೇಶನ ಮುಗಿದ ಮೇಲೆ ಕಳುಹಿಸತಕ್ಕಂಥಾ ವ್ಯವಸ್ಥೆ ಮಾಡುತ್ತೇನೆ. ಈಗ ನೀರಿನ ತೊಂದರೆ ಯಾಗಿರುವುದು ಇಂಡೀ ತಾಲ್ಲೂಕು ಈ ಇಂಡೀ ತಾಲ್ಲೂಕಿನ ಬಗ್ಗೆ ೧೬ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ಎ ಆರ್.ಡಬ್ಲು ಸ್ಕೀಮುಗಳೂ ಇವೆ. ಈ ೧೬ ಸ್ಕೀಂಗಳಲ್ಲಿ ೧೧ ಸ್ಕೀಂಗಳು ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಿ ಕಳುಹಿಸಿದ್ದೇವೆ. ಇದರಲ್ಲಿ ರಾಜ್ಯ ಸರ್ಕಾರ ೫ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ರೆಕ್‌ಮೆಂಡ್ ಆಗಿದೆ.

ಶ್ರೀ ಎಸ್.ಎಸ್. ಅರಕೇರಿ.—ಈ ೧೬ ಸ್ಕೀಂಗಳು ಯಾವ್ಯಾವ ಊರಿಗೆ ಸಂಬಂಧಪಟ್ಟದ್ದಾಗಿದೆ ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಈಗಾಗಲೆ ಅದನ್ನು ನೋಡಿದ್ದಾರೆ. ಬೇಕಾದರೆ ಇನ್ನೊಂದು ಸಾರಿ ತೋರಿಸುತ್ತೇನೆ. ಡಿಡಿಸಿ. ಮೀಟಿಂಗ್‌ನಲ್ಲಿ ಈ ಬಗ್ಗೆ ೧೬ ಸ್ಕೀಂಗಳು ಏನು ರೆಕ್‌ಮೆಂಡ್ ಆಗಿ ಬಂದಿವೆಯೋ ಅದಂಲ್ಲಿ ೧೧ ಸ್ಕೀಂಗಳನ್ನು ಕೇಂದ್ರ ಸರ್ಕಾರಕ್ಕೆ ರೆಕ್‌ಮೆಂಡ್ ಮಾಡಿ ಕಳುಹಿಸಿದ್ದೇವೆ. ರಾಜ್ಯ ಸರ್ಕಾರದವರು ಇದರಲ್ಲಿ ೫ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಅವರು ರೆಕ್‌ಮೆಂಡ್ ಮಾಡಿ ಕಳುಹಿಸಿದ್ದಾರೆ.

ಶ್ರೀ ಎಸ್.ಎಸ್. ಅರಕೇರಿ.— ಸ್ವಾಮಿ, ಈ ಪ್ರಶ್ನೆಯ (ಈ)ಗೆ ಉತ್ತರವಾಗಿ ಅಂತರರಾಷ್ಟ್ರೀಯ ಕುಡಿಯುವ ನೀರು ಸರಬರಾಜು ನೈರ್ಮಲ್ಯ ದಶಕದಲ್ಲಿ (೧೯೮೧ ರಿಂದ ೧೯೯೦)ವರೆಗೆ ಎಲ್ಲಾ ಗ್ರಾಮ, ಹರಿಜನರ ಕಾಲೋನಿ, ತಾಂಡ ಹಾಗೂ ಜನತಾ ಮನೆಗಳ ಕಾಲೋನಿಗಳಿಗೆ ಸುರಕ್ಷಿತ ಕುಡಿಯುವ ನೀರನ್ನೊದಗಿಸುವ ಕ್ರಮಗಳನ್ನು ಕೈಕೊಳ್ಳಲಾಗಿದೆ ಅಂತ ಹೇಳಿದ್ದೀರಿ. ಈ ಸಂದರ್ಭದಲ್ಲಿ ಅವರಿಗೆ ಪ್ರತ್ಯೇಕವಾಗಿ ಜನತಾಮನೆಗಳನ್ನು ಕಟ್ಟಬೇಕೆಂದು ಹೇಳುತ್ತಾ ಇಲ್ಲ. ನಾನು ಹೇಳುವುದೇನೆಂದರೆ ಸರ್ಕಾರದವರು ಎಸ್‌ಸಿ ಮತ್ತು ಎಸ್‌ಟಿ ಏನೂ ಪ್ರೊಟೆಕ್ಷನ್ ಕೊಡಬೇಕೋ, ಆ ಬಗ್ಗೆ ಏನೊಂದು ಅಸ್ಪೃಶ್ಯತೆ ನಿವಾರಣೆ ಮಾಡಬೇಕೋ ಅದನ್ನು ನಿವಾರಣೆ ಮಾಡುವುದರಲ್ಲಿ ತಾವು ವಿಫಲತೆ ಹೊಂದಿದ್ದೀರಿ ಎನ್ನುವ ಭಾವನೆ ನಾವು ಕೇಳುತ್ತಿದ್ದೇವೆಯೇ ಹೊರತು, ಅವರಿಗೆನೇ ಪ್ರತ್ಯೇಕವಾದ ಬಾವಿ ಬೇಕು ಎಂದು ಹೇಳುತ್ತಾ ಇಲ್ಲ. ಈ ಅಸ್ಪೃಶ್ಯತೆ ನಿವಾರಣೆ ಮಾಡುವುದರಲ್ಲಿ ತಾವು ಫೈಲ್ ಆಗಿದ್ದೀರಿ, ಆ ಬಗ್ಗೆ ಏನು ಒಂದು ಧೋರಣೆ

ಇದೆಯೋ ಅದು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಅದಕ್ಕೋಸ್ಕರವಾಗಿ ನಾನು ಅವರಿಗೆ ಪ್ರತ್ಯೇಕವಾದ ಬಾವಿ ಕೊಡಿ ಎಂದು ಕೇಳಿದ್ದೇನೆ. ಈ ಬಗ್ಗೆ ಇನ್ನು ಮುಂದಾದರೂ ಕೂಡ ಸರಿಯಾದ ಕಾರ್ಯಕ್ರಮ ಕೈಗೊಳ್ಳುತ್ತೀರಾ ಎನ್ನುವುದನ್ನು ತಾವು ತಿಳಿಸಬೇಕು ಜೊತೆಗೆ ಈ ಒಂದು ತಾಂಡ ಹಾಗೂ ಜನತಾ ಕಾಲೋನಿ ಮನೆಗಳಿಗೆ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಇದರ ಬಗ್ಗೆ ತಾವು ವಿಶೇಷ ಗಮನ ಕೊಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಬಿ. ರಾಮಯ್ಯ —ಮಾನ್ಯ ಅಧ್ಯಕ್ಷರೇ, ಒಂದೇ ವರ್ಷದಲ್ಲಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕು ಎನ್ನುವುದು ಕಷ್ಟದ ಕೆಲಸ. ನಾನು ತಮ್ಮಲ್ಲಿ ಪದೇ ಪದೇ ಹೇಳುತ್ತಿದ್ದೇನೆ, ಹರಿಜನ ಗಿರಿಜನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಕಳೆದ ೧೨ ವರ್ಷಗಳಲ್ಲಿ ಸರ್ಕಾರದವರು ಏನೇನು ಕಾರ್ಯಕ್ರಮ ಗಳನ್ನು ತೆಗೆದುಕೊಂಡು ಸುಮಾರು ೨೫ ಸಾವಿರ ಭಾವಿಗಳನ್ನು ತೆಗೆದಿದ್ದರೋ ಅದಕ್ಕಿಂತ ಹೆಚ್ಚಾಗಿ ನಾವು ನಮ್ಮ ಸರ್ಕಾರ ಬಂದಮೇಲೆ, ನಾನು ಖಾತೆಯನ್ನು ವಹಿಸಿಕೊಂಡ ಮೇಲೆ ಒಂದೂವರೆ ವರ್ಷದಲ್ಲಿ ಸುಮಾರು ೧೨ ಸಾವಿರ ಭಾವಿಗಳನ್ನು ತಗೆಯಿಸಿದ್ದೇನೆ. ಇಷ್ಟು ಪ್ರಗತಿಯನ್ನು ಸಾಧನೆ ಮಾಡಿರು ವುದನ್ನು ಮಾನ್ಯ ಅಧ್ಯಕ್ಷರು ಗಮನಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮಗೆ ಗಂಡ್ಡಿನ ಸಮಸ್ಯೆಯಿಲ್ಲ ಕೇಂದ್ರ ಸರ್ಕಾರ ಮೊನ್ನೆನಡೆದಂಥ ರಾಷ್ಟ್ರ ಮಟ್ಟದ ಸಮ್ಮೇಳನದಲ್ಲಿ ನಾನೂ ಪಾಲು ಗೊಂಡಿದ್ದು ಅದರಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲಾಗಿದೆ. ಆದರ ಪ್ರಕಾರ ನೀರಿನ ಸಮಸ್ಯೆ ಯನ್ನು ಹೋಗಲಾಡಿಸುವುದಕ್ಕೆ ದುಡ್ಡಿನ ಕೊರತೆಯಿಲ್ಲ, ಎನ್ನುವ ಅಭಿಪ್ರಾಯ ಬಂದಿದೆ. ನಾವು ರಾಜ್ಯದಲ್ಲಿ ಸುಮಾರು ೩೦ ಸಾವಿರ ಹರಿಜನ ಕಾಲೋನಿಗಳನ್ನು ಗುರುತಿಸಿದ್ದೇವೆ, ಮತ್ತು ಇವುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು, ಆದ್ಯತೆಯ ಕ್ರಮಗಳನ್ನು ತೆಗೆದುಕೊಂಡು ಪೂರ್ಣವಾಗಿ ನೀರಿನ ವ್ಯವಸ್ಥೆಯನ್ನು ಮಾಡಿ ಕೊಡುತ್ತೇವೆ. ನಮ್ಮ ರಾಜ್ಯದಲ್ಲಿ ೨೨ ಗ್ರಾಮಗಳು, ೨೫ ಸಾವಿರ ಹರಿಜನರ ತಾಂಡಗಳು ಇವೆ, ಈ ಎಲ್ಲಾ ಕಡೆಗೂ ಏಕಕಾಲದಲ್ಲಿ ನೀರಿನ ಸೌಕರ್ಯವನ್ನು ಒದಗಿಸ ಬೇಕೆನ್ನುವುದು ಕಷ್ಟ, ಆದರೆ ಆದ್ಯತೆಯ ಮೇಲೆ ತಕ್ಷಣ ಎಲ್ಲಿ ನೀರನ್ನು ಕೊಡಬೇಕು ಎಂದು ಗುರುತಿಸಿ ಆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಇಂಥ ಕಡೆ ಸಮಸ್ಯೆ ಹೆಚ್ಚು ಇದೆಯೆಂದು ತಿಳಿಸಿದರೆ ತಕ್ಷಣ ಪರಿಹಾರ ಕಂಡುಹಿಡಿಯುವ ವ್ಯವಸ್ಥೆ ಮಾಡುತ್ತೇವೆ

ಶ್ರೀ ಎಸ್.ಎಸ್. ಅರಕೇರಿ.—ನನ್ನ ಪ್ರಶ್ನೆಗೆ ಉತ್ತರವಾಗಿ ತಾವು ೧೫ ಹಳ್ಳಿಗಳಿಗೆ ನೀರನ್ನು ಒದಗಿಸಿಲ್ಲ, ಮತ್ತು ೩೦ ಹರಿಜನ ಕಾಲೊನಿಗಳಿಗೆ ಪ್ರತ್ಯೇಕವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲವೆಂದು ಹೇಳಿದ್ದಾರೆ. ದಯವಿಟ್ಟು ಅವು ಯಾವುವು, ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಮಯ್ಯ.—ಪ್ರತ್ಯೇಕವಾಗಿ ಹಳ್ಳಿಗಳ ಪಟ್ಟಿ ಬೇಕಾದರೆ ಮಾನ್ಯ ಸದಸ್ಯರಿಗೆ ನಂತರ ಒದಗಿಸಿಕೊಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ನನ್ನ ಕ್ಷೇತ್ರದಲ್ಲಿ ಹರಿಜನರು ನೀರನ್ನು ತೆಗೆದುಕೊಳ್ಳುವಾಗ ಅನೇಕ ಸಂರ್ಧದಲ್ಲಿ ಗಲಾಟೆಗಳು ಆಗಿ ಪೋಲೀಸ್ ಕೇಸ್ ಆಗಿದೆ ನಾನೆ ಅನೇಕ ಬಾರಿ ಇಂಥ ಕೇಸುಗಳನ್ನು ಇತ್ಯರ್ಥ ಮಾಡಿ ಬಂದಿದ್ದೇನೆ. ಹರಿಜನ ಕಾಲೋನಿಗೆಂದೂ ಮುಂಜೂರಾ ಗಿದ್ದ ಭಾವಿಯನ್ನು ಬೇರೆ ಕಡೆಗೆ ಹಾಕಿದರೆ ತಾವು ಅಸ್ಪೃಶ್ಯತೆ ನಿವಾರಣೆಯನ್ನು ಹೇಗೆ ಪ್ರೋಡಂತಾ ಗುತ್ತದೆ. ಇದಕ್ಕೆ ಬದಲಾಗಿ ಹರಿಜನರ ಕಾಲೋನಿಯಲ್ಲಿಯೇ ಭಾವಿಗಳನ್ನು ತೆಗೆದ ಬೇರೆಯವರು ಬಂದು ನೀರನ್ನು ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಮಾಡಿದರೆ ಅಸ್ಪೃಶ್ಯತೆ ನಿವಾರಣೆಯನ್ನು ಸ್ವಲ್ಪ ಮಟ್ಟಿಗಾದರೂ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಬೇರೆಯವರು ನೀರಿಗಾಗಿ ಇವರ ಕಾಲೋನಿಗೆ ಹೋಗುವ ಹಾಗೆ ಮಾಡುತ್ತೀರಾ ? ಮತ್ತು ಹರಿಜನರ ಕಾಲೋನಿಗೆ ಮುಂಜೂ ರಾಗಿದ್ದ ಭಾವಿಯನ್ನು ಬೇರೆ ಕಡೆಯಲ್ಲಿ ಹಾಕಿರುವುದರ ಬಗ್ಗೆ ವಿಚಾರಣೆ ಮಾಡುತ್ತೀರಾ ?

ಶ್ರೀ ಬಿ. ರಾಮಯ್ಯ.—ಬಹುಶ: ಇಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ. ಯಾವುದಾದರೂ ಒಂದು ಕಡೆಯಲ್ಲಿ ಈ ತರಹ ಆಗಿದ್ದರೆ ಖಂಡಿತವಾಗಿಯೂ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ. ಹರಿಜನರ ಕಾಲೋನಿಗೆ ಸ್ಯಾಂಕ್ಷನ್ ಆದ ಭಾವಿಯನ್ನು ಇನ್ನೊಂದು ಕಡೆ ಹಾಕಿ ದ್ದರೆ ನಾನು ಅವರ ಮೇಲೆ ತೀವ್ರವಾದ ಕ್ರಮವಾದ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಚಿಕ್ಕನಾಯ್ಕನಹಳ್ಳಿಯ ಹತ್ತಿರ ಅರಕೇರಿ ಗ್ರಾಮದಲ್ಲಿ ಈ ರೀತಿ ಯಾಗಿದೆ ಎಂದು ನಾನು ತಮಗೆ ಬರೆದು ಕೊಟ್ಟಿದ್ದೇನೆ. ತಾವೂ ಸಹ ಇದರ ಬಗ್ಗೆ ಸೂಕ್ತ ಕ್ರಮ

ತೆಗೆದು ಕೊಳ್ಳುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೀರಿ, ಬೇಗ ಇದನ್ನು ಮಾಡಿಕೊಡಿ ಎಂದು ಕೇಳುತ್ತದ್ದೇನೆ.

ಶ್ರೀ ಬಿ. ರಾಮಯ್ಯ.—(ಉತ್ತರ ಬಿಲ್ಲ)

Construction of M.N.P. Roads in Afzalpur Taluk.

271 SRI M.Y. PATIL (Afzalpur)—Will the Minister for Public Works be pleased to state.—

(a) the number of remaining villages in Afzalpur taluk to which M,N.P. roads are to be constructed on the basis of 1981 census.

(b) whether roads may be formed through M.N.P. to Bhosaga, Badawal, Bidanur, Havanoor, Ankalagi, Tivoor, Bhoganahalli, Tellur, Chinnamale, Saganur Villages which comes under Afzalpur taluk,

(c) if so, whether work will be taken up to construct communication roads in the ensuing year through M.N.P?

SRI KAGODU THIMMAPPA (Minister for Public Works.)—

(a) 1981 census has not yet been published officially. No new M.N.P. scheme has been initiated on the basis of 1981 census.

(b) Since these roads have not been included in present approved M.N P. Scheme these villages cannot be taken in M.N.P. Scheme.

(c) This question does not arise in view of the reply furnished above.

ಶ್ರೀ ಎಂ.ವೈ. ಪಾಟೀಲ್.—ಸ್ವಾಮಿ, ಅಫಜಲ್‌ಪುರ ತಾಲ್ಲೂಕಿನಲ್ಲಿ ಮಿನಿಮಂನೀಡ್ಸ್ ಪ್ರೋಗ್ರಾಂನಲ್ಲಿ ರಸ್ತೆಯ ನಿರ್ಮಾಣ ಕಾರ್ಯವನ್ನು ೧೯೮೧ರ ಜನಗಣತಿಯ ಪ್ರಕಾರ ಎಷ್ಟು ಹಳ್ಳಿಗಳಿಗೆ ಬರುತ್ತವೆ ಎಂದು ಕೇಳಿದಾಗ ಮಾನ್ಯ ಸಚಿವರು ೧೯೮೧ರ ಜನಗಣತಿಯ ಪಟ್ಟಿ ಅಧಿಕೃತವಾಗಿ ಪ್ರಕಟವಾಗಿಲ್ಲ ಎಂದು ಹೇಳಿದ್ದಾರೆ. ಆದರೆ ೧೯೭೧ರ ಜನಗಣತಿಯ ಪ್ರಕಾರ ಅಂಕಲಗಾ ಎನ್ನುವ ಹಳ್ಳಿ ಮಿನಿಮಂ ನೀಡ್ಸ್ ಪ್ರೋಗ್ರಾಂನಲ್ಲಿ ಬರುವಂಥಾದ್ದು ಇದೆ, ಅದೇ ಪ್ರಕಾರ ಇನ್ನು ಯಾವ ಹಳ್ಳಿಗಳು ಬರುತ್ತವೆ ಅವುಗಳನ್ನಾದರೂ ತೆಗೆದುಕೊಂಡು ರಸ್ತೆಯ ಕೆಲಸಗಳನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಯ ಪ್ರಕಾರ ನಮಗೆ ಇನ್ನೂ ೧೯೮೧ರ ಜನಗತಿಯ ಪಟ್ಟಿ ಬಂದಿಲ್ಲ.ಆದರ ಒಂದು ಆಧಾರದ ಮೇಲೆ ಮಿನಿಮಂ ನೀಡ್ಸ್ ಪ್ರೋಗ್ರಾಂನ್ನು ನಾವು ತೆಗೆದುಕೊಳ್ಳತಕ್ಕದ್ದು ಇದೆ. ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ೧೯೭೧ ರ ಜನಗಣತಿಯ ಪ್ರಕಾರ ಕೆಲವೊಂದು ಹಳ್ಳಿಗಳನ್ನು ಹೇಳಿದ್ದಾರೆ ಅವೆಲ್ಲವೂ ಕೂಡ ಮಿನಿಮಂ ನೀಡ್ಸ, ಪ್ರೋಗ್ರಾಂನಲ್ಲಿ ಬರುವುವಿಲ್ಲ, ಏಕೆಂದರೆ ಅವುಗಳ ಜನಸಂಖ್ಯೆ ೧೫೦೦ ಕ್ಕಿಂತ ಕಡಿಮೆ ಇದೆ.

ಶ್ರೀ ಎಂ. ವೈ. ಪಾಟೀಲ್.—೧೯೭೧ರ ಜನಗಣತಿಯ ಪ್ರಕಾರ ಹಾಪನೂರಿನ ಪ್ರಜಾಸಂಖ್ಯೆ ೧೫೦೦ ಕ್ಕಿಂತ ಹೆಚ್ಚು ಇದೆ. ಬಂಡಪಾಳದ ಜನಸಂಖ್ಯೆಯೂ ಕೂಡ ಹೆಚ್ಚು ಇದೆ, ಆದಾಗ್ಯೂ ರಾಜ್ಯ ಸರ್ಕಾರದವರು ರಸ್ತೆ ನಿರ್ಮಾಣ ಕಾರ್ಯವನ್ನು ಇಲ್ಲಿ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು?